ಡಿಸ್ಟ್ರಿಕ್ಟು.	ಸ್ಥಳ.			ಬಂದು ಇಂಪೀರಿಯಲ್ ಕ್ವಾರ್ಟ್ಸಿಗೆ ಸಮವಾದ ಕೇರು ಬಂದಕ್ಕೆ ಖರೀದಿ.						ರೊಟ್ಟೀ ಕಾರಬಾನೆ ಯವರಿಗೆ ಕೇರು ಬಂದಕ್ಕೆ ಖರೀದಿ.	ಇತರ ಗೊತ್ತಾದ ಬೆಲೆ.
				ಉತ್ತಮ.			ಕನಿಷ್ಟ.				
ಹಾಸನ.	ಅರಕಲ್‌ಗೂಡು ತಾಲ್ಲೂಕಿನ ಕೊಂಗಲಾಳೆ ಮರಟಿ ಮತ್ತು ಕಡಿವಿನ ಹೊಸ ಹಳ್ಳಿ ಉಕ್ಕಡ ಗ್ರಾಮಗಳಲ್ಲಿ			0	0	8	0	0	6		
	ಡಿಟೋ	ಡಿಟೋ	ರಾವಣಾಥಪುರ ಮತ್ತು ಬನವಾಪಟ್ಟಣ ಗ್ರಾಮಗಳಲ್ಲಿ	0	0	10	0	0	6		
	ಡಿಟೋ	ಡಿಟೋ	ಕೀರಲಾಪುರ, ರುದ್ರಪಟ್ಟಣ, ಕರಗೋಡು ಮರಟಿ ಮತ್ತು ಗಂಗೂರ್ ಮರಟಿ ಎಂಬ ಗ್ರಾಮಗಳಲ್ಲಿ ..		0	0	8	0	0	6		
	ಡಿಟೋ	ಡಿಟೋ	ಕಟ್ಟೀಪುರ, ಮತ್ತು ಮಜ್ಜನಹಳ್ಳಿ ಮರಟಿ ಎಂಬ ಗ್ರಾಮಗಳಲ್ಲಿ		0	0	10	0	0	6		
	ಡಿಟೋ	ಡಿಟೋ	ಕೋಣನೂರು ಗ್ರಾಮದಲ್ಲಿ		0	1	0	0	0	6		
ಕಡೂರು.	ಕೊಪ್ಪಾ ಮತ್ತು ಮೂಡಿಗೆರೆ ತಾಲ್ಲೂಕು ಕಸಬಾ ಮತ್ತು ಗ್ರಾಮಾಂತ್ರಗಳಲ್ಲಿ.			0	1	6	0	0	6		
	ಇತರ ತಾಲ್ಲೂಕು ಕಸಬಾಗಳಲ್ಲಿ			0	1	4	0	0	6		
	ಇತರ ಗ್ರಾಮಗಳಲ್ಲಿ			0	1	0	0	0	6		
ಶಿವಮೊಗ್ಗಾ	ಶಿವಮೊಗ್ಗಾ ಟರ್ವ			0	1	6	0	1	0		
	ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳು			0	1	0	0	0	6		
	ಡಿಸ್ಟ್ರಿಕ್ಟಿನ ಇತರೆ ಎಲ್ಲಾ ಭಾಗಗಳಲ್ಲಿ			0	1	6	0	0	6		
ಚಿತ್ರದುರ್ಗ.	ತಾಲ್ಲೂಕ್ ಕಸಬಾಗಳಲ್ಲಿ ಮತ್ತು ಗ್ರಾಮಗಳಲ್ಲಿ			0	1	0	0	0	6		

ಹುಕುಂ ಬಮೋಜೀಬ್,
ಯಂ. ನಾರಾಯಣರಾವ್, ಫಾರ್ ಆ|| ಚೀಫ್ ಸೆಕ್ರೆಟರಿ.

ಮೈಸೂರು ಗವರ್ಮೆಂಟಿನಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ನಂ. 16183.—ಜಿ. 4152. ಮು|| ತಾರೀಖು 27ನೇ ಮಾರ್ಚಿ 1895.—ಮದ್ರಾಸ್ ಪೋಸ್ಟ್‌ಮಾಸ್ಟರ್ ಜನರಲ್‌ರವರಿಂದ ಮೈಸೂರು ದೇಶದ ತಮಾಂ ಪೋಸ್ಟಲ್ ಆಫಿಸರ್‌ಗಳಿಗೆ ಸಾದರ ಮಾಡಲ್ಪಟ್ಟ ಇದರಡಿ ಕಂಡ ಲೆಟರ್ ಸರ್ವರ ತಿಳುವಳಿಕೆ ಬಗ್ಗೆ ಘಾಯಿಷ್ ಮಾಡಲ್ಪಟ್ಟಿರುತ್ತೆ:—

[ಮದ್ರಾಸ್ ಪೋಸ್ಟ್ ಮಾಸ್ಟರ್ ಜನರಲ್‌ರವರಿಂದ—ಮೈಸೂರು ದೇಶದ ತಮಾಂ ಪೋಸ್ಟಲ್ ಆಫಿಸರ್‌ಗಳಿಗೆ.

ಜೆ. ಯಲ್. ನಂ. 82. ಡಿ. ಸಿ. ಯಂ. 6. ನಂ.—2 ಮರ್ಕುಂ 6ನೇ ಮಾರ್ಚಿ 1895—ಮದ್ರಾಸ್ ಪೋಸ್ಟ್ ಮಾಸ್ಟರ್ ಜನರಲ್‌ರವರ ಆಫಿಸ್

ಮೈಸೂರ್ ಗವರ್ಮೆಂಟಿಗೆ ಕೇರಿದ ಒಬ್ಬ ಉದ್ಯೋಗಸ್ಥನು ರಜಾದಮೇಲೆ ಇರುವ ಕಾಲದಲ್ಲಿ "ಮೈಸೂರ್ ಸರ್ಕಾರ್" ಯಂಬ ದಾಗಿ ವಿಳಾಸ ಬರಿಯಲ್ಪಟ್ಟ ವಂದು ಪದಾರ್ಥವನ್ನು ಬಗರ್ ಹಾನಲ್ ಪೋಸ್ಟಾಫಿಸ್ ಮುಖಾಂತರ ರವಾನಿಸುವ ಬಗ್ಗೆ ಇಂಡಿಯ್ ಪೋಸ್ಟಲ್ ಗೈಡಿನ (1895ನೇ ಜನವರಿ ಮಾಹೆ ಬಗೆ) 330*ನೇ ಕ್ಲಾಜಿನ ನಿಯಮಗಳಿಗೆ ವಿರುದ್ಧವಾಗಿ ಬಂದಾನೊಂದು ವೇಳೆ ರುಜು ಮಾಡು ತ್ತಾನೆ. ರಜಾದ ಮೇಲಿರುವ ಒಬ್ಬ ಆಫಿಸರನು ಗವರ್ಮೆಂಟ್ ಆಫಿಸಿಗೆ ತಿಳಿಸಬೇಕಾದ ಯಾವ ಸರ್ಕಾರಿ ವರ್ತಮಾನದ ವಿಷಯದಲ್ಲಾ ಗಲಿ ಬಗರ್ ನೌಕರನಾಗಿ ಇರತಕ್ಕದ್ದು: ಮತ್ತು ಆತನು ಈ ಕಾರಣದಿಂದ ಬಂದು ಪದಾರ್ಥವನ್ನು "ಸರ್ಕಾರಿ" ಯಾಗಿ ಪೋಸ್ಟಾಫೀಸ್ ದ್ವಾರಾ ರವಾನಿಸುವದಕ್ಕೆ ಅಧಿಕಾರ ಉಂಟಾಗಿರುವದಿಲ್ಲ.

2. ಪರಂತು ಗವರ್ಮೆಂಟ್ ಕೆಲಸಗಳಿಗೆ ಲಗಾವ್ ಆದ ಕಾಗದ ಪತ್ರಗಳನ್ನು "ಬಗರ್ ಹಾನಲ್ ಸರ್ಕಾರಿ" ಯಂಬದಾಗಿ ಬರೆ ದು ರುಜುಮಾಡಿ ರವಾನಿಸುವದಕ್ಕೆ ಆತನಿಗೆ ಅವಕಾಶವಿರುತ್ತೆ, ಈ ಬಗ್ಯಾಗಿ ಇಂಡಿಯ್ ಪೋಸ್ಟಲ್ ಗೈಡಿನ 138ನೇ ಕ್ಲಾಜಿನಲ್ಲಿ ನಿಯಮ ಉಂಟುಮಾಡಲ್ಪಟ್ಟಿರುತ್ತೆ: ಮತ್ತು ಈ ತರಹೆ ವಿಳಾಸ ಬರಿಯಲ್ಪಟ್ಟು ರವಾನಿಸುವನಿಂದ ಕ್ರಮವಾಗಿ ರುಜು ಮಾಡಲ್ಪಟ್ಟ ಪದಾರ್ಥಗಳು, ಮೈಸೂರು ಗವರ್ಮೆಂಟಿಗೆ ಕೇರಿದ ಒಬ್ಬ ಉದ್ಯೋಗಸ್ಥನಿಗೆ ವಿಳಾಸ ಬರಿಯಲ್ಪಟ್ಟಿದ್ದ ಪಕ್ಷದಲ್ಲಿ ಬಗರ್ ಹಾನಲ್ ಯಾ ವಾಗ್ಯೂ ಪಾವತಿ ಮಾಡಲ್ಪಡಬೇಕು. ಪರಂತು ಸದರೀ ಪದಾರ್ಥಗಳು ರವಾನಿಸಲ್ಪಡುವ ಮತ್ತು ಪಾವತಿ ಮಾಡಲ್ಪಡುವ ಉಭಯ ಸ್ಥಳಗಳೂ ಮೈಸೂರು ದೇಶದ ಸರಹದ್ದಿನೊಳಗೆ ಇರತಕ್ಕದ್ದು. ಹೆಚ್. ಫ್ಯೂರರ್, ಪೋಸ್ಟ್ ಮಾಸ್ಟರ್ ಜನರಲ್.]

ತಾರೀಖು 16ನೇ ಏಪ್ರೆಲ್ 1895.

ನಂ. 17630.—ಜಿ. 4826. ಮೈಸೂರ್ ಸರ್ವಿಸ್ ರೆಗ್ಯುಲೇಷ್ಟಗಳ 172ನೇ ಆರ್ಟಿಕಲ್ ಅನುಸರಿಸಿ ಹುಣಸೂರ್ ತಾಲ್ಲೂಕು ಅಮಲ್‌ದಾರ್ ಟಿ. ಎಸ್. ಮಿಯರ್ ನಿಜಾಮುದ್ದಿ ಅಲ್ಲೀಖಾನರವರಿಗೆ, 1895ನೇ ಇಸವಿ ಏಪ್ರೆಲ್ 20ನೇ ಮರ್ಕುಂ ಲಾಗಾಯಿತು ಅಥವಾ ಅವರುಸರಿಯೋಗಿಸಿಕೊಳ್ಳುವ ತಾರೀಖ್ ಮೊದಲು ಯರಡುವಾರಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ.

2. ತಾಲ್ಲೂಕ ಸಿರಸ್ತೇದಾರ್ ನಂಜುಂಡಯ್ಯನವರು ಅಮಲ್ದಾರರು ರಜಾ ಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಆಥವಾ ಮು ತ್ತೊಂದು ಹುಕುಂ ಕೊಡಲ್ಪಡುವತನಕ ಸದರೀ ತಾಲ್ಲೂಕಿನ ಚಾಲ್ತೀ ಕೆಲಸಗಳ ಇ‌ಚಾರ್ಜಿನಲ್ಲಿರುತಲಿರತಕ್ಕದ್ದು.

ನಂ. 17711.—ಜಿ. 4853. ಮೈಸೂರ್ ಸರ್ವಿಸ್ ರೆಗ್ಯುಲೇಷ್ಯಗಳ 188ನೇ ಆರ್ಟಿಕಲ್ ಅನುಸರಿಸಿ ಮೈಸೂರ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷ್ಶನರ್ ಮೆಸ್ಟರ್ ಕೆ. ಆರ್. ಶ್ರೀನಿವಾಸಯ್ಯಂಗಾರ್ಯವರಿಗೆ, 1895ನೇ ಇಸವಿ ಏಪ್ರೆಲ್ 10ನೇ ತಾರೀಖು ಲಾಗಾಯತು ಒಂ ದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತಿದೆ.

ತಾರೀಖು 20ನೇ ಏಪ್ರೆಲ್ 1895.

ನಂ. 18020.—ಜಿ. 4913. ಚಿತ್ರದುರ್ಗ ಡಿಸ್ಟ್ರಿಕ್ಟ್ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷ್ಶನರ್ ಮೆಸ್ಟರ್ ಸಿ. ದೇವರಾಜೇಅರಸು ನವರು, 1895ನೇ ಇಸವಿ ಫಿಬ್ರವರಿ 12ನೇ ತಾರೀಖಿನ ಪೂರ್ವಾನ್ವಿತ ವೊಬಲು, ಮೈಸೂರು ಡಿಸ್ಟ್ರಿಕ್ಟ್‌ಗೆ ವರ್ಗವಾಡಲ್ಪಟ್ಟಿರುತ್ತಾರೆ.

ತಾರಿಖು 22ನೇ ಏಪ್ರೆಲ್ 1895.

ನಂ. 17984.—ಜಿ. 4909. ಮೂರನೇ ಗ್ರೇಡ್ ಅಸಿಸ್ಟೆಂಟ್ ಸರ್ಜಿಯನ್ ಮೆಸ್ಟರ್ ಜಿ. ಜಿ. ನೊರೋನಾ, ಎಲ್. ಎಂ. ಎಸ್. ಯವರು, ಸದರೀ ಗ್ರೇಡಿನಲ್ಲಿ ಏಳು ಸಂವತ್ಸರಗಳ ನೌಕರಿಯನ್ನು ಪೂರೈಸಿರುವದರಿಂದ 95ನೇ ಇಸವಿ ಮಾರ್ಚಿ 28ನೇ ತಾರೀಖು ಲಾ ಗಾಯತು ಎರಡನೇ ಗ್ರೇಡಿಗೆ ಬಡ್ತೀ ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್,
ಎಲ್. ಅನಂತಸಾಮಿರಾವ್,
ಅಫಿಷಿಯೇಟಿಂಗ್ ಜೀಫ್ ಸೆಕ್ರೆಟರಿ

ತಾರೀಖು 17ನೇ ಏಪ್ರೆಲ್ 1895.

ನಂ. 17671.—ಜೆ. 1096. ಪೊಲೀಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್ ಮೆಸ್ಟರ್ ಹಾರ್ಡಿಯವರು, 1895ನೇ ಇಸವಿ ಮಾ ರ್ಚಿ 26ನೇ ತಾರೀಖಿನಲ್ಲಿ ಕೆಲಸಕ್ಕೆ ವಾಪಸ್‌ಬಂದರಾಗಿ 95ನೇ ಇಸವಿ ಫಿಬ್ರವರಿ 18ನೇ ತಾರೀಖುಳ್ಳ 12633—ಜಿ. 2818ನೇ ನಂಬರ್ ಇಸ್ತಿಹಾರ್‌ನಾಮೇಯ ಮೂಲಕ ಕೊಡಲ್ಪಟ್ಟಿದ್ದ ರಜಾ ಪೈಕಿ ಅವರುಪಯೋಗಿಸಿಕೊಳ್ಳದೆಯಿರುವ 3 ತಿಂಗಳ ಪ್ರಿವಿಲೀಜ್ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತಿದೆ.

ಹುಕುಂ ಬಮೋಜೀಬ್,
ವಿ. ಎ. ನರಸಿಂಹಯ್ಯಂಗಾರ್,
ಜನರಲ್ ಸೆಕ್ರೆಟರಿ.